

ಎತ್ತಿಕೊಳ್ಳುವಲ್ಲಿ ರಿಕ್ಷಾದವನು, 'ಸಾರಿ ಕಣವ್ವ, ನೀನೇ ಬಂದು ಪರ್ಸು ಎತ್ತಿಕೊಂಡು ಹೋಗ್ಲಿ ಅಂತ ಹೇಳಿಕಳಿಸ್ದೆ' ಅಂದ. ರಿಕ್ಷಾದವನ ಮಾತಿನಿಂದ ನನಗೆ ಅವಮಾನವಾಯಿತೇನೋ ಎಂದು ತಿಳಿದ ಹುಡುಗಿ, ಅದಾಗ ಪರ್ಸು ಸಿಕ್ಕಿದ ಸಂತೋಷವನ್ನು ಕಳೆದುಕೊಂಡವಳಂತೆ ಒಳಗೆ ಬರುವಲ್ಲಿ ನನ್ನತ್ತ 'ಸಾರಿ' ಅಂದಳು. ನಾನು, 'ಇರ್ಲಿ ಬಿಡಿ, ನಾನು ರವಸ್ಟು ಹಂಗೇ ಇದ್ದೀನಲ್ಲ' ಅಂದೆ. ಅವಳು ನನ್ನ ಮಾತನ್ನು ಪರಿಗಣಿಸದೆ, 'ಇಲ್ಲ ಇಲ್ಲ... ಹಂಗೇನಿಲ್ಲ' ಅಂದು ನಕ್ಕಳು.

ನಾವು ಮುಖ ತಿರುಗಿಸಿ ಕಚೇರಿಯ ಕಡೆ ಕಾಲಿಡುವಲ್ಲಿ ರಿಕ್ಷಾದವನು ಹುಡುಗಿಗೆ, 'ಗ್ಯಾನ ಕಣಮ್ಮ, ನೀವು ಸ್ಯಾನೆ ದೂರದಿಂದ ಬಂದಂಗೆ ಕಾಣಿಸ್ತದೆ. ನಾನಲ್ದೆ ಬ್ಯಾರೆಯವರಾಗಿದ್ರೆ ಇವತ್ತು ನಿಮ್ಮ ಕಥೆ ಕಷ್ಟ ಆಯ್ತಿತ್ತು' ಅಂದು ರಿಕ್ಷಾ ಸ್ಟಾರ್ಟ್ ಮಾಡಿದ. ಅವನು ಅನಗತ್ಯ ಅಪನಂಬಿಕೆಯ ಮಾತಾಡಿದನಲ್ಲ ಎಂಬ ಕಾರಣಕ್ಕೊ ಏನೋ ತಿರುಗಿ, 'ಸಾರಿ ರಿಕ್ಷಾದವ ನನ್ನಿಂದ ನಿಮ್ಮನ್ನ ತಪ್ಪು ತಿಳಿಕಳುವಂಗೆ ಆಯ್ತು' ಅಂದಳು. ಆದರೆ, ರಿಕ್ಷಾಡ್ರೈವರ್, ಸರತಿಯ ಸಾಲಿನಲ್ಲಿದ್ದವರೆಲ್ಲ ನನ್ನನ್ನು ಅನುಮಾನದಿಂದ ನೋಡಿದ್ದು ನಿಜವೇ ಆಗಿ, ಅದು ನನ್ನ ವಂಶ ಮೂಲದ ಕಥೆಯನ್ನು ಕೆಣಕಿಬಿಟ್ಟಂತಾಗಿತ್ತು!

***

...ನನ್ನ ತಂದೆ, ತಾತ ಮುತ್ತಾತಂದಿರ ಕುಲ ಕಸುಬು ಕಳ್ಳತನವೇ ಆಗಿ ನಮ್ಮದು ಅಲೆಮಾರಿ ಬುಡಕಟ್ಟಾಗಿತ್ತು. ವ್ಯಾಪಾರಸ್ಥರು, ವ್ಯವಸಾಯಸ್ಥರು,